ನಾನೊಬ್ಬಳೇ.

ಇದಕ್ಕೂ ಹೊಂದಿಕೊಂಡುಬಿಟ್ಟಿದ್ದೆ.

★★★

ನಾಲ್ಕು ದಿನಗಳ ಹಿಂದೆ, ''ಅಪ್ಪ ಈಸ್ ನೋ ಮೋರ್... ಅಪ್ಪನ ವಕೀಲರು ಖುದ್ದು ತಿಳಿಸಿದ್ದಾರೆ, ನನಗೆ ಕೆಲವು ಆಸ್ತಿಗಳನ್ನು ವಿಲ್ ಮಾಡಿದ್ದಾರೆ. ನೆಕ್ಸ್ಟ್ ಮಂತ್ ಬರ್ತ್‌ಡೇನಿ ಹದಿನೈದು ದಿನಗಳ ಮಟ್ಟಿಗೆ" ಇನ ಮೆಸೇಜ್ ಹಾಕಿ ಅತ್ತಿದ್ದ ಸೂಚ್ಯವಾಗಿ. ಅವನಿಗೆ ಸಮಾಧಾನ ಹೇಳಲು ತೋಚದೇ ಕಲ್ಲಾಗಿದ್ದೆ.

ನನಗೆಲ್ಲಾ ಅಯೋಮಯ. ಅಮ್ಮ ನನಗೆ ಫೋನ್ ಮಾಡಿದ್ದಳು. ಇನ ಹೇಳಿದ ಸುದ್ದಿಯನ್ನೇ ಜೋಯಿಸರೂ ಹೇಳಿದ್ದರಂತೆ, ಮೊಮ್ಮೊಗನಿಗೆ ಅನಾಯಾಸವಾಗಿ ಆಸ್ತಿ ಬಂತೆಂಬ ಸಂತೋಷವೇ? ಅಮ್ಮನ ದನಿಯ ಏರಿಳಿತಗಳಲ್ಲಿ ನನಗೆ ಕಂಡದ್ದು ಅದೇ. ಅದಕ್ಕೆ ನಾನು ತೆತ್ತ ಬೆಲೆಯೆಷ್ಟು? ಬಲಿಪೀಠದ ಪಶು ನಾನಾಗಿಬಿಟ್ಟಿದ್ದೆ. ಚಿಕ್ಕಂದಿನಿಂದಲೂ ಎದುರುಮಾತನಾಡುವ ಧೈರ್ಯವೇ ಇಲ್ಲ; ವಿವೇಚನೆ ಇದ್ದರೂ...

★★★

ಗಡಿಯಾರದತ್ತ ನೋಡಿದೆ. ಆಗಲೇ ಎಂಟಾಗುತ್ತ ಬಂತು. ಮಳೆಯ ಸಾಂದ್ರತೆ ಕಡಿಮೆಯಾಗಿತ್ತು. ಬಲವಂತವಾಗಿ ಮೇಲೆದ್ದು ಬಾಗಿಲಲ್ಲಿ ಬಿದ್ದಿದ್ದ ಪೇಪರ್ ಎತ್ತಿ ಒಳಗಿಟ್ಟು, ಮತ್ತೊಂದು ಲೋಟ ಕಾಫಿ ಬೆರೆಸಿ ರೇಡಿಯೊ ಹಚ್ಚಿದೆ. ''ಹರಿವ ನದಿಯು ನೀನು, ಸುರಿವ ಮಳೆಯು ನೀನು'' ನನ್ನ ಇಷ್ಟದ ಭಾವಗೀತೆಗೆ ದನಿಗೂಡಿಸುತ್ತ ದಿವಾನದಲ್ಲಿ ಪೇಪರ್ ಹರಡಿ ಕಾಫಿ ಹೀರುತ್ತ ವಾರ್ತೆಗಳ ಸಾರವನ್ನು ಹೀರಿದ್ದಾಗಿತ್ತು. ನೌಕರಿ ಬಿಟ್ಟ ಮೇಲೆ ಕೆಲಸದವಳನ್ನು ಬಿಡಿಸಿದ್ದೆ. ಸಿಂಕ್‌ನಲ್ಲಿದ್ದ ಮುಸುರೆ ಪಾತ್ರೆಗಳನ್ನು ತೊಳೆದು ಮನೆ ಗುಡಿಸಿ ಒರೆಸುವ ಹೊತ್ತಿಗೆ ಒಂದೂವರೆ ಗಂಟೆ ಕಾಲ ಕಳೆದಿತ್ತು. ಅರ್ಧ ಗಂಟೆಯಲ್ಲಿ ಚಕಚಕನೆ ಮಾಡಿ ಮುಗಿಸುತ್ತಿದ್ದ ಸಿದ್ದಮ್ಮನ ಮುಂದೆ ನಾನು ನಿಧಾನವೇ? ಆದರೇನು ಅವಳಿಗಿಂತ ಚೆನ್ನಾಗಿ ಕೆಲಸ ಮಾಡಿದ್ದೀನಿ. ಪಾತ್ರೆಯಲ್ಲಿ ಕಲೆ ಹಾಗೆ ಉಳಿದರೂ ಮೂಲೆವರೆಗೂ ಪೊರಕೆ ಹೋಗದಿದ್ದರೂ ಉಸಿರೆತ್ತದೆ ಸಹಿಸಿಕೊಂಡಿರುತ್ತಿದ್ದೆ. ಬಿಟ್ಟು ಹೋದರೆ ಎಂಬ ಭಯ! ಈಗ ಹಾಗಿಲ್ಲ, ಕೈಕಾಲಾಡಿಸಲು ಒಂದು ಅವಕಾಶ, ಹೊತ್ತು ಹೋಗಬೇಕೆಂಬ ಅನಿವಾರ್ಯ.

★★★

ವರ್ಷ ಬರುವ ಹೊತ್ತಿಗೆ ತರಕಾರಿ ಹಾಕಿದ ಉಪ್ಪಿಟ್ಟು, ಸಜ್ಜಿಗೆ ಮಾಡಿ ಮುಗಿಸಿದೆ. ಇನ್ನೇನು ಬರುವ ಹೊತ್ತು. ಬೆಳಿಗ್ಗೆ ಕೇಳಿದ ಹಾಡು ಮತ್ತೆ ಕೇಳಬೇಕೆನ್ನಿಸಿ ಗೂಗಲಿಸಿದೆ. ಸಿಕ್ಕಿತು. ಒಂದೆರಡು ಬಾರಿ ಕೇಳಿದೆ. ಮತ್ತೆ ಅಳುಬಂತು, ನರೋತ್ತಮನ ನೆನಪಾಯಿತು. ವರ್ಷ ಬರುವ ಹೊತ್ತಾಯಿತೆಂದು ಕಣ್ಣೊರೆಸಿಕೊಂಡೆ.

★★★

ವರ್ಷ ಬಂದವಳೇ, "ಹಸಿವು, ತಿಂಡಿ ತೊಗೊಂಡು ಬಾ. ಟ್ರೈನ್‌ನಲ್ಲಿ ನಾನು ತಿನ್ನಲಿಲ್ಲ" ಎಂದಾಗ ಇಬ್ಬರಿಗೂ ತಿಂಡಿ ಹಾಕಿದ್ದ ತಟ್ಟೆಗಳನ್ನು ತಂದು ಡೈನಿಂಗ್ ಟೇಬಲ್ ಮೇಲಿಟ್ಟೆ. "ನಮ್ಮೂರಲ್ಲಿ ಇಡ್ಲಿ, ದೋಸೆ, ಪೊಂಗಲ್‌ಗೇ ಹೊಂದಿಕೊಂಡುಬಿಟ್ಟಿದ್ದೇನೆ. ಮನೆಯವರಿಗೆಲ್ಲ ಅದೇ ಇಷ್ಟವಲ್ಲ?" ಮಾತನಾಡುತ್ತಲೇ ತಟ್ಟೆ ಖಾಲಿ ಮಾಡಿದ್ದಳು.

"ಹಾಂ, ಈಗ ಹೇಳು ?ಇನ ಹೇಗಿದ್ದಾನೆ? ನೀನು ಸ್ವಲ್ಪ ಇಳಿದಂತೆ ಕಾಣ್ತೆ, ಯೆಟ್ ಬ್ಯೂಟಿಫುಲ್, ಕೂಡುಕುಟುಂಬದಲ್ಲಿ ಸ್ವಂತಕ್ಕೆ ಸಮಯವಿಲ್ಲ, ಅದಕ್ಕೆ ಹೆಚ್ಚು ಮಾತನಾಡಲಾಗದು ಹೀಗೆ, ಹೊರಗೆ